ದಿನೇಶ್, ಗುಡ್ಡದೂರು
ಗಾಂಧಿ ಟೋಪ್ಪಿಗೂ, ಇಂದಿನ ರಾಜಕಾರಣಿಗಳ ಟೋಪ್ಪಿಗೂ ಇರುವ ವ್ಯತ್ಯಾಸ?



ಅದು ಘನತೆವೆತ್ತ ಹೋರಾಟದ ಚಿಹ್ನೆಯಾದ ಗಾಂಧಿಟೋಪಿ; ಇದು ರಾಡಿಯೆದ್ದ ಗಂಧೀ ಟೋಪಿ

ಬಿ. ಚಂದ್ರೇಗೌಡ, ಬೆಂಗಳೂರು
ಸತಿಯ ಮಾತು ಕೇಳಿ ರಾಮನನ್ನು ವನಕ್ಕಟ್ಟಿದ ದಶರಥನಿಗೆ ಆ ಸಂದರ್ಭವನ್ನು ಸಮರ್ಥವಾಗಿ ಏಕೆ ನಿಭಾಯಿಸಲಾಗಲಿಲ್ಲ?
ಸತಿಗೆ ಕೊಟ್ಟ ವರಕ್ಕೆ 'ಕಂಡೀಷನ್ಸ್ ಅಪ್ಲೈ' 'ಡಿಸ್‌ಕ್ಲೈಮರ್'ಗಳನ್ನು ಹಾಕಲು ಮರೆತಿದ್ದರಿಂದ.

ಸುಶೀಲಾ ಪಾಟೀಲ, ಸಂಕೇಶ್ವರ
ಕನ್ನಡದ ಮೇರು ನಟರೆಲ್ಲ ತೀರಿಕೊಂಡರೇಕೆ?
ಮೇಲಿನ ನಿರ್ದೇಶಕನು ತನ್ನ ಚಿತ್ರಕ್ಕೆ ಇವರನ್ನು ಆಯ್ಕೆ ಮಾಡಿದನಂತೆ.

ಬಾ.ರಂ. ಸುರೇಶ, ಶಿವಮೊಗ್ಗ
ರಾತ್ರಿ ಮಲಗಿದರೆ ಕನಸಿನಲ್ಲಿ ಸುಂದರಿಯರು ಬಂದು ಕಾಡುತ್ತಾರಲ್ಲ, ತಪ್ಪಿಸಿಕೊಳ್ಳೋದು ಹೇಗೆ ಶಿವಾ?



ಬೆಳಗಿನ ಹೊತ್ತು ಮಲಗಿ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ
ಹಿಂದೆ ವಾದ್ಯಗಳು ಕಡಿಮೆ, ಗೀತೆಗಳು ಬಹಳ ಇಂಪು. ಇಂದು ವಾದ್ಯಗಳು ಬಹಳಷ್ಟು, ಗೀತೆಗಳು ಇಂಪಿಲ್ಲ. ಏಕೆ?
ಆಗ ಹಾಡಿಗೆ ಪಕ್ಕವಾದ್ಯವಿತ್ತು. ಈಗ ವಾದ್ಯಕ್ಕೆ ಪಕ್ಕಗಾಯನ ಆಗಿದೆ.

ದೀಪಕ್ ಆರ್. ಶೇಟ್, ಬೆಂಗಳೂರು
ಕಳ್ಳ ಲೆಕ್ಕಕ್ಕೆ 'ಕೃಷ್ಣನ ಲೆಕ್ಕ' ಅಂತ ಹೇಳಲು ಕಾರಣವೇನು?
ಯಾರಿಗೂ ತಿಳಿಯದಂತೆ ಕಿಲೋಮೀಟರ್‌ಗಟ್ಟಲೆ ಉದ್ದದ ಸೀರೆಯ ಸ್ಟಾಕ್ ಇಟ್ಟಿದ್ದನಲ್ಲ.

ಅಮರಯ್ಯ ಪತ್ರಿಮಠ, ಸುರಪುರ
ಕೆಲವರ ಹೃದಯ ಕಲ್ಲಾಗಿರುತ್ತದಂತೆ. ಏಕೆ?
ಸಮಾಜದ ಶೀತಲತೆಗೆ ಹೆಪ್ಪುಗಟ್ಟುವುದರಿಂದ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ
ಕಂಡು ಅನುಭವಿಸಲೋ ಉಂಡು ಅನುಭವಿಸಲೋ?
ಇತರರ ಸಂತಸವನ್ನು ಕಂಡು, ಇತರರ ನೋವನ್ನು ಉಂಡು ಅನುಭವಿಸಿ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಮನೆ ಬಳಕೆಗೆ ತಂದ ವಸ್ತುಗಳನ್ನು ಪೂಜಿಸಿ ಬಳಸುತ್ತಾರೆ. ಆದರೆ ದುಬಾರಿ ಮೊಬೈಲನ್ನು ಪೂಜಿಸುವುದಿಲ್ಲವೇಕೆ?
ಎಡಗೈಯಲ್ಲಿ ಬಳಸುವ ವಸ್ತುಗಳಿಗೆ ಸಾಮಾನ್ಯವಾಗಿ ಪೂಜೆ ಇರುವುದಿಲ್ಲ.

ರವಿ ಎಂ. ಪೈ, ಹೊನ್ನಾವರ
ಕೆಲವು ಮಠಾಧೀಶರು ಅಡ್ಡದಾರಿ ಹಿಡಿಯಲು ಏನು ಕಾರಣ?
ಒರೆಗೆ ಹಚ್ಚದೆ, ತಾಮ್ರವನ್ನು ಚಿನ್ನವೆಂದು ನಂಬಿದ್ದು ನಮ್ಮದೇ ತಪ್ಪು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸಿಹಿಸುದ್ದಿಗಳು ಮಧುಮೇಹಿಗಳಿಗೆ ತೊಂದರೆ ಕೊಡುವುದಿಲ್ಲವೆ?
ಊಹೂಂ. ಅವು 'ಫಲಪ್ರದ'ವಾದ್ದರಿಂದ ಫ್ರಕ್ಟೋಸ್ ಇರುತ್ತದೆ, ಗ್ಲೂಕೋಸ್ ಅಲ್ಲ.

ರಾಜಶೇಖರ ಹಾದಿಮನಿ, ಧಾರವಾಡ
ಆಸ್ಪತ್ರೆಗಳನ್ನು ಇಲ್ಲೊಬ್ಬ 'ಮನುಷ್ಯರ ಗ್ಯಾರೇಜ್'ಗಳು ಎನ್ನುತ್ತಾನೆ. ಇದು ಸರಿಯೆ?
ದೇಹದ ಎಂಜಿನ್ ಆದ ಹೃದಯವನ್ನು ಆಫ್ ಮಾಡಿ ರಿಪೇರಿ ಮಾಡುವುದಿಲ್ಲವಲ್ಲ!

ಮಹಾವೀರ ಕಾಸರ, ಶಿವಮೊಗ್ಗ
ದುಬಾರಿ ಬೆಲೆ ಕೊಟ್ಟರೆ ಶೀಘ್ರ ದರ್ಶನ ಕೊಡುವ ದೇವರ ಅಸ್ತಿತ್ವವನ್ನು ನಂಬಬೇಕಾ?
ಹ್ಞ! ದರ್ಶನವಾಗುವುದು ದೇವರದಲ್ಲ, ವಿಗ್ರಹದ್ದು. ಬಡಪಾಯಿ ದೇವ ನಿಮ್ಮಲ್ಲೇ ಇರುವನಲ್ಲ!

## ವಾರದ ಪ್ರಶ್ನೆ

ಎನ್.ವಿ. ಶ್ರೀನಿವಾಸ್, ಮೈಸೂರು
ಚಕ್ಕುಲಿ ಮಾಡಲು ಹೋದರೆ ಕೋಡುಬಳೆ ಆಯಿತಲ್ಲ, ಎಣ್ಣೆಯಲ್ಲೇನಾದರೂ ಮಿಸ್ಟೇಕು ಇರಬಹುದೆ ರಮಾಬಾಯಿ?
ಹೌದು. ಮತ್ತೆ ಚಕ್ಕುಲಿ ಮಾಡಬೇಕಾದಾಗ 'ಎಣ್ಣೆ' ಏರಿಸದೆ ಯತ್ನಿಸಿ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
ಸಾಮಾನ್ಯವಾಗಿ ದಿವ್ಯಾಂಗರು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಏಕೆ?
ಪ್ರಕೃತಿನಿಯಮ. ಮುಳ್ಳಿನ ಮಧ್ಯೆ ಬೆಳೆದ ಗುಲಾಬಿಯು ಬಳ್ಳಿಯ ಮಲ್ಲಿಗೆಗಿಂತ ದೀರ್ಘಾಯು.

ಎಂ.ಸಿ. ಧನ್ಯತಾ, ಬೆಂಗಳೂರು
ಕೇವಲ ಮೂರನೆಯ ತರಗತಿಯವರೆಗೆ ಓದಿದ್ದ ರಾಜ್ ಒಂದು ವಿಶ್ವವಿದ್ಯಾಲಯವೇ ಆಗಿದ್ದು ಹೇಗೆ?
ಸುತ್ತಲಿನ ಬದುಕಿನ ಪದರ ಪದರವನ್ನೂ ಆಸಕ್ತಿಯಿಂದ ಅಧ್ಯಯನ ಮಾಡಿದ್ದರಿಂದ.

ಗಂಜಾಂ ನಾಗರಾಜ್, ಮೈಸೂರು
ಈಗಿನ ಕಾಲದಲ್ಲಿ ಹೆಂಡತಿ ಗಾಂಧಾರಿಯಂತೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡರೆ ಏನಾಗಬಹುದು?



ಆರ್‌ಟಿಓದವರು ಅವಳ ಡ್ರೈವಿಂಗ್ ಲೈಸೆನ್ಸ್ ರದ್ದು ಮಾಡಬಹುದು.

ವಿ. ಹೇಮಂತಕುಮಾರ್, ಬೆಂಗಳೂರು
ಗಂಡನಿಗೂ ಮನಸ್ಸು ಇದೆ ಎಂದು ಹೆಂಡತಿಗೆ ತಿಳಿಯುವುದಿಲ್ಲವೆ?
ತಿಳಿಯುತ್ತದೆ. ಆದರೆ ಯಾವ ಚೆಲುವೆಯ ಮೇಲೆ ಎಂದು ತಿಳಿಯುವುದು ನಿಧಾನ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಮೌನಕ್ಕಿರುವಷ್ಟು ಬೆಲೆ ಮಾತಿಗೇಕಿಲ್ಲ?
ಅಮ್ಮನಿಗೆ ಬೆಲೆ ಕಟ್ಟಲಾಗದು; ಮೌನ ಅಮ್ಮ; ಮಾತು ಅವಳ ಗರ್ಭದಿಂದ ಹೊಮ್ಮಿದ ಶಿಶು.

■ ರಾಮ್